ಹಾಸನ ಡಿಸ್ಟ್ರಿಕ್ಟ್.

1890ನೇ ಇಸವಿ 25ನೇ ಜುಲೈ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ.

ಹಾಸನ ಡಿಸ್ಟ್ರಿಕ್ಟ್ ಅರಕಲ್‌ಗೂಡು ತಾಲ್ಲೂಕಿನಲ್ಲಿ ಕುರಂಗದ ಕಲ್ಲುಗಳನ್ನ ಜವಾಯಿಸಿಕ್ಕೊಳ್ಳತಕ್ಕ ಹಕ್ಕುದಾರಿಯು ತಾಲ್ಲೂಕು ಕಛೇರಿಯಲ್ಲಿ ಸ್ ೧೮೯೦ನೇ ಇಸವಿ ಸೆಪ್ಟಂಬರ್ ತಾರೀಖು 1ನೇ ದಿವಿ 11 ಘಂಟೆಗೆ ಪ್ರಾರಂಭಿಸಿ ಬಹಿರಂಗವಾಗಿ ಹರಾಜು ಮಾಡಲ್ಪಡುವದು.

2. ಆಮಲ್‌ದಾರ್ರು ಅಥವಾ ತಿರಸ್ತೇದಾರ್ರಾಗಲಿ ಹರಾಜು ಮಾಡಿಸುವರು.

3. ಈ ಹರಾಜಿನ ಚಡ ದರಖಾಸ್ತು ಹಾಸನ ಡಿಸ್ಟ್ರಿಕ್ಟ್ ಡೆಪ್ಯೂಟಿ ಕಮ್ಮಿಷನರವರಿಂದ ಮಂಜೂರ್ ಮಾಡುವ ಪರಿಯಂತ್ರ ಖಾಯಂ ಆದ್ದಾಗಿ ತಿಳಿದುಕೊಳ್ಳಕೂಡದು.

4. ಈ ಇಜಾರೆಯು ಸ್ ೧೮೯೧ನೇ ಇಸವಿ ಮಾರ್ಚಿ 31ರ ವರಿಗೆ ಜಾರಿಯುಲ್ಲಿ ಇರತಕ್ಕದ್ದು.

5. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಶೇಕಡಾ 25 ರೂಪಾಯಿನಂತೆ ಆಗುವ ಮೊಬಲಗನ್ನು ಡಿಪಾಜಿಟ್ ಯಿಡಬೇಕಲ್ಲದೆ ಹರಾಜು ಮಂಜೂರ್ಮಾಡಲ್ಪಟ್ಟು ಸಂಗತಿ ಡೆಪ್ಯೂಟಿ ಕಮ್ಮಿಷನರವರಿಂದ ಕ್ರಯದಾರನಿಗೆ ತಿಳಿಸಲ್ಪಟ್ಟ ತಾರೀಖು ಮೊದಲು 7 ದಿವಸದೊಳಗಾಗಿ ಕ್ರಯದ ಪೂರ್ತಿ ಮೊಬಲಗಿನ ಮೇಲೆ ರೂಪಾಯಿ 1ಕ್ಕೆ ಬಂದಾಣಿಯಂತೆ ಆಗುವ ಲೋಕಲ್‌ಸೆಸ್ ದೇಖೀಲ್ ಬಾಕಿ ಕ್ರಯದ ಮೊಬಲಗನ್ನ ಪಾವತಿ ಮಾಡದಿದ್ದರೆ ಹಾಂಗೆ ಡಿಪಾಜಿಟ್ ಯಿಟ್ಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗದುಕ್ಕೊಳ್ಳಲ್ಪಡುವದು. ಹಾಂಗೆ ಡಿಪಾಜಿಟ್ ಮೊಬಲಗು ಹಾಜರ್ಮಾಡದಿದ್ದರು ಅಥವಾ ಬಾಕಿ ಕ್ರಯದ ಮೊಬಲಗು ಹಾಜರ್ಮಾಡದಿದ್ದರು ಹಕ್ಕುದಾರಿಯು ಅವ್ವಲ್ ಕ್ರಯದಾರನ ಖರ್ಚಿಗು ಮತ್ತು ನುಕ್ಸಾನಿಗೂ ವಳಸಟ್ಟು ಪುನಹ ವಿಕ್ರಯಿಸಲ್ಪಡುವದು.

6. ಹರಾಜು ಷರತ್ತುಗಳು.

(a.) ಹಿಡುವಳಿ ಜಮೀನಿನಲ್ಲಿ ಯಿರತಕ್ಕ ಕಲ್ಲುಗಳನ್ನ ತೆಗದುಕ್ಕೊಳ್ಳ ಬೇಕಾದರೆ ಹಿಡುವಳೀದಾರನ ಸಮ್ಮತಿಯನ್ನ ಪಡಿಯಬೇಕು, ಜಮೀನು ಹಿಡುವಳಿದಾರನು ತನ್ನ ಕಲ್ಲುಗಳನ್ನು ಸ್ವಂತ ಪ್ರಯೋಜನಕ್ಕಾಗಿ ತೆಗದುಕೊಳ್ಳಲು ಕೂಡದು ಇಜಾರೆದಾರನಿಗೆ ಮಾರಬೇಕೆ ಹೊರ್ತು ಇತರ ಜನಗಳಿಗೆ ಮಾರಲು ಕೂಡದು.

(b.) ಇಜಾರೇದಾರನು ಹುಲ್ಲುಬನ್ನಿ ಇಜಾರೆದಾರರ ಚರಾವು ಹಕ್ಕಿನಲ್ಲಿ ಪ್ರವೇಸಿಸ ಕೂಡದು.

(c.) ಬಂಜರು ಜಮೀರ್ಗಳು ಸಾಗುವಳಿ ಬಗ್ಯೆ ದರಖಾಸ್ತು ಬಂದಲ್ಲಿ ಆ ಪ್ರಕಾರ ಸಾಗುವಳಿಗೆ ಕೊಟ್ಟು ಬಿಡುವದಕ್ಕೆ ಕುರಂಗದ ಇಜಾರೆದಾರನು ಅಡ್ಡಿ ಹೇಳಕೂಡದು. ಅಂಥಾ ಜಮೀನುಗಳಲ್ಲಿ ಕುರಂಗದ ಕಲ್ಲುಗಳನ್ನ ತೆಗದುಕೊಳ್ಳತಕ್ಕ ಹಕ್ಕುಮಾತ್ರ ಇಜಾರೆದಾರನಿಗೆ ಪುಳದಿರುತ್ತೆ.

(d.) ಈ ಇಜಾರೆದಾರನು ಕಲ್ಲುಗಳಿಗೋಸ್ಕರ ಜಮೀರ್ಗಳನ್ನ ಅಗಿಯಕೂಡದು. ಬಂದುವೇಳೆ ಹಾಗೆ ಆಗದಲ್ಲಿ ಆ ಗುಂಡಿಗಳನ್ನ ತಕ್ಷಣ ಮುಚ್ಚಿಬಿಟ್ಟು ಸಾಗುವಳಿಗೆ ಜಮೀರ್ ಲಾಯಕ್ ಯಿರುವ ಹಾಂಗೆ ಮಾಡಬೇಕು.

ಪಿ. ಯರ್. ಪೂರ್ಣಯ್ಯ,
ಡೆಪ್ಯೂಟಿ ಕಮ್ಮಿಷನರ್.

ನಗರ ಡಿವಿಜ್ಞ ಡಿಸ್ಟ್ರಿಕ್ಟ್ ಜಡ್ಜ್ರವರ ಕೋರ್ಟಿನಲ್ಲಿ.

1890ನೇ ಇಸವಿ ಅರ್ಜೀ ನಂಬರ್ 67.

ಮೃತಪಟ್ಟ ಸುಬ್ಬೇಗವ್ವಡನ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರ ವೊದ್ದೇಗವ್ವಡನು ಮೃತಪಟ್ಟ ಸದರೀ ಸುಬ್ಬೇಗವ್ವಡನಿಗೆ ತಮ್ಮ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ಚಿಕ್ಕಮಗರನಳ್ಳಿಗ್ರಾಮ ಸ್ಥಳದ ವೊದ್ದೇಗವ್ವಡನು ಸದರೀ ಸ್ಥಳದ ವಾಸಸ್ಥನಾಗಿ ಮೃತಪಟ್ಟ ಸುಬ್ಬೇಗವ್ವಡನ ಜಿಂದಗಿ ಬಗ್ಯಾಗಿ ಬರತಕ್ಕ 3,000 ರೂಪಾಯಿ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ವೊದ್ದೇಗವ್ವಡನ ಅರ್ಜಿಯನ್ನು 1890ನೇ ಇಸವಿ ಅಗಸ್ಟು ತಿಂಗಳು ತಾರೀಖು 20ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಸೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸುಬ್ಬೇಗವ್ವಡನ ಆಸ್ತಿಗೆ ಹಕ್ಕುದಾರರಾದ ವಿಸಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿಇದೆ.

1890ನೇ ಇಸವಿ ಜುಲೈ ತಿಂಗಳು 14ನೇ ತಾರೀಖಿನಲ್ಲಿ ಕೋರ್ಟು ಮೊಹರ್ ಮತ್ತು ನನ್ನ ದಸ್ತಖತೊಡನೆ ಕೊಡೋಣಾಗಿದೆ.

ಸಿ. ಕ್ರೈಸ್,
ಡಿಸ್ಟ್ರಿಕ್ಟ್ ಜಡ್ಜ್.